ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-6, May- June 2025, Pp. 45-52
©*IIMRD*, Mysuru
www.iimrd.com

# ಸುಧಾ ಆಡುಕಳ ಅವರ 'ಬಕುಲದ ಬಾಗಿಲಿನಿಂದ' ಅಂಕಣ ಕೃತಿ : ಸ್ತ್ರೀ ಕೇಂದ್ರಿತ ನೆಲೆ

**ಶೋಭ ಎಲ್.ಎನ್**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ಸೃಷ್ಟಿಯ ಮೂಲದಲ್ಲಿ ಮಹಿಳೆಯು ಶಕ್ತಿಸ್ವರೂಪಿಯಾಗಿ ಗೋಚರವಾದರೆ, ಸೃಷ್ಟಿ ತತ್ವದ ಚರಿತ್ರೆಯ ಸಂಕಥನದಲ್ಲಿ ಪುರುಷ ಆ ಸ್ಥಾನವನ್ನು ಆಕ್ರಮಿಸಿ ಈ ಶಕ್ತಿಸ್ವರೂಪಿಯನ್ನು ಅಧೀನ ಮಾಡಿಕೊಂಡು ರಾರಾಜಿಸಿದ ಪರಿಸ್ಥಿತಿಗಳು ನಿರಂತರವಾಗಿ ಕಾಣಿಸಿಕೊಳ್ಳುತ್ತವೆ. ಹೆಣ್ಣಿಗೂ ಅವಳದೇ ಆದ ಭಾವನೆಗಳಿವೆ ಎಂಬುದನ್ನು ಮರೆತುಹೋದ ವ್ಯವಸ್ಥೆ, ಅವಳನ್ನು ಅತ್ಯಂತ ನಿಕೃಷ್ಟ ಸ್ವರೂಪದಲ್ಲಿ ರೂಪಿಸಿಕೊಳ್ಳುವ ಆಚರಣೆಗಳ ನೂರಾರು ಉದಾಹರಣೆಗಳು ಪುರಾಣ ಕಾಲದಿಂದಲೂ ನಮಗೆ ಗೋಚರವಾಗುತ್ತವೆ. ರಾಮಾಯಣ, ಮಹಾಭಾರತ ಸೇರಿದಂತೆ ಪ್ರಸಿದ್ಧತೆಯನ್ನು ಪಡೆದ ಕಾಲಘಟ್ಟದ ನಾಯಕರ ನಡುವೆ ಮಹಾನ್ ಶಕ್ತಿಸ್ವರೂಪಿಯಾದ ಹೆಣ್ಣು ನಲುಗಿ ಹೋಗಿದ್ದಾಳೆ. ಆದ ಕಾರಣ "ಧರ್ಮ, ಸಂಪ್ರದಾಯ, ಪರಂಪರೆ, ಮೂಢನಂಬಿಕೆಗಳು ಇವುಗಳ ಹೊದಿಕೆಯಲ್ಲೇ ಅಡಗಿರುವಂಥ ಸ್ತ್ರೀಯರನ್ನು ಆ ಚಿಪ್ಪಿನಿಂದ ಮುಕ್ತರನ್ನಾಗಿಸಿ ಅವರ ಬಗ್ಗೆ ನಿರ್ಮಿಸಲಾಗಿರುವ ದಂತಕಥೆಗಳು, ಊಹಾಪೋಹಗಳು, ಮಿಥ್ಯತೆಯನ್ನು ಈಗ ಬಹಿರಂಗಪಡಿಸಬೇಕಾಗಿದೆ."1 ಈ ಆಶಯದಿಂದಲೇ ಸ್ತ್ರೀ ಸುತ್ತಲೂ ಇರುವ ಇಡೀ ವ್ಯವಸ್ಥೆಯನ್ನು ಅಂಕಣಕಾರ್ತಿಯಾದ ಸುಧಾ ಆಡುಕಳ ಅವರು 'ಇಲ್ಲಿ ಪಿಸುಮಾತುಗಳಿವೆ' ಎಂಬ ಅಡಿಬರಹವನ್ನು ಹೊಂದಿರುವ 'ಬಕುಲದ ಬಾಗಿಲಿನಿಂದ' ಎಂಬ ಅಂಕಣ ಬರಹಗಳ ಸಂಕಲನ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಸ್ತ್ರೀಯರ ಬಗ್ಗೆ ಸುಧಾ ಆಡುಕಳ ಅವರು ತಮ್ಮ ಅಂಕಣ ಬರಹಗಳಲ್ಲಿ ನಿರೂಪಿಸಿರುವ ಪಾತ್ರಸ್ವರೂಪವನ್ನು ಸ್ತ್ರೀ ಕೇಂದ್ರಿತ ನಲೆಯಲ್ಲಿ ವಿಮರ್ಶಾತ್ಮಕವಾಗಿ ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಅಂಕಣ ಸಾಹಿತ್ಯ, ಸುಧಾ ಆಡುಕಳ, ಬಕುಲದ ಬಾಗಿಲಿನಿಂದ, ಅವಧಿ

## ಪೀಠಿಕೆ

'ಬಕುಲದ ಬಾಗಿಲಿನಿಂದ' ಕೃತಿಯು 'ಅವಧಿ' ಎಂಬ ಅಂತರ್ಜಾಲ ಪತ್ರಿಕೆಗೆ ಬರೆದ ಒಟ್ಟು 21 ಅಂಕಣಗಳ ಸಂಕಲನ ಕೃತಿಯಾಗಿದೆ. ಒಂದೊಂದು ಅಂಕಣವೂ ಒಂದೊಂದು ಹೆಣ್ಣಿನ ಜೀವನಗಾಥೆಯನ್ನು ಹೊಂದಿದ್ದು, ರಾಮಾಯಣ, ಮಹಾಭಾರತದ ಜೊತೆಗೆ ಅನಂತರದ ಕಾಲಘಟ್ಟದಿಂದ ಆಧುನಿಕದವರೆಗೂ ಇರುವ ಆದರ್ಶ ಎನಿಸಿಕೊಂಡಂತಹ ಸ್ತ್ರೀಯರ ಬದುಕಿನ ಅನಾವರಣವಿದೆ. ರಾಮಾಯಣ, ಮಹಾಭಾರತದ ಸೀತೆ, ಊರ್ಮಿಳೆ, ರಾಧಾ, ಚಿತ್ರಾಂಗದ, ದ್ರೌಪತಿ, ಕುಂತಿ, ಅಂಬೆ, ಶಕುಂತಲೆ, ಮಾಧವಿ ಇವರಲ್ಲದೆ

*Please cite this article as:* ಶೋಭ ಎಲ್.ಎನ್. (2025). ಸುಧಾ ಆಡುಕಳ ಅವರ 'ಬಕುಲದ ಬಾಗಿಲಿನಿಂದ' ಅಂಕಣ ಕೃತಿ : ಸ್ತ್ರೀ ಕೇಂದ್ರಿತ ನೆಲೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(6). ಪು.ಸಂ.* 45–52

ಬುದ್ಧನ ಪತ್ನಿ ಯಶೋಧರೆ, ಹೊಯ್ಸಳ ರಾಜನ ಪತ್ನಿ ಶಾಂತಲೆಯ ಆದರ್ಶ ಮಾರ್ಗವು ಇಂದಿಗೂ ಅನುಕರಣೀಯ. ಈ ಆದರ್ಶ ಸ್ತ್ರೀಯರ ಬಗ್ಗೆ ಸುಧಾ ಆಡುಕಳ ಅವರು ನಿರೂಪಿಸಿರುವ ಪಾತ್ರಸ್ವರೂಪವನ್ನು ಸ್ತ್ರೀ ಕೇಂದ್ರಿತ ನಲೆಯಲ್ಲಿ ವಿಮರ್ಶಾತ್ಮಕವಾಗಿ ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**ಚಿತ್ರಾಂಗದ**

ರಾಧೆ ಕೃಷ್ಣನನ್ನು ಮೋಹಿಸಿದಂತೆ ಅರ್ಜುನನ್ನು ಮೋಹಿಸಿದವಳು ಚಿತ್ರಾಂಗದ. ಆದರೆ ಇವಳ ಸಾಮಾನ್ಯ ರೂಪಕ್ಕೆ ಅರ್ಜುನ ಮರುಳಾಗದೆ ಇವಳನ್ನು ತಿರಸ್ಕರಿಸುತ್ತಾನೆ. ಈ ಕಾರಣದಿಂದಲೇ ಚಿತ್ರಾಂಗದ ಕೃತಕ ಸೌಂದರ್ಯವನ್ನು ಮದನನಿಂದ ಪಡೆಯುತ್ತಾಳೆ. ನಂತರ ಇವಳ ಸೌಂದರ್ಯಕ್ಕೆ ಮರುಳಾಗಿ ಅರ್ಜುನ ಇವಳನ್ನು ಒಂದು ರಾತ್ರಿ ಸಂಧಿಸಿ ಅಲ್ಲಿಂದ ಹೊರಟು ಹೋಗುತ್ತಾನೆ. ಚಿತ್ರಾಂಗದೆಗೆ ತನ್ನ ಈ ಕೃತಕ ಸೌಂದರ್ಯದ ನಶ್ವರತೆ ತಿಳಿದು ಅದನ್ನು ಮದನನಿಗೆ ಹಿಂತಿರುಗಿ ಮೊದಲಿನಂತಾಗುತ್ತಾಳೆ. ಆದರೆ ಚಿತ್ರೆಯ ದೇಹ ಮಾತ್ರ ಮೊದಲಿನಂತೆ ಪಾವಿತ್ರ್ಯತೆಯನ್ನು ಪಡೆಯಲು ಸಾಧ್ಯವೇ? ಆದರೆ ಅವಳಿಗೆ ನೈಜತೆಯಲ್ಲಿಯೇ, ಸತ್ಯದಲ್ಲಿಯೇ ಸೌಂದರ್ಯವಿದೆ ಎಂಬ ಅರಿವಾಗುತ್ತದೆ. ಈ ಸತ್ಯ ಅರಿವಾಗುವುದರೊಳಗೆ ಅವಳು ತನ್ನ ಸಾಂಸಾರಿಕ ಜೀವನವನ್ನು ಕಳೆದುಕೊಂಡಿರುತ್ತಾಳೆ. ಕೇವಲ ಸೌಂದರ್ಯಕ್ಕಾಗಿಯೇ ಅವಳನ್ನು ಮೋಹಿಸಿ, ಸಂಧಿಸಿ, ಬಿಟ್ಟು ಹೋಗುವ ವರ್ತನೆಯನ್ನು, ಪ್ರೀತಿಯ ನೈತಿಕತೆಯನ್ನು ಸ್ತ್ರೀವರ್ಗವು ಪುರುಷರಲ್ಲಿ ಪ್ರಶ್ನಿಸುವಂತಿದೆ. ನೈಜತೆ, ಸತ್ಯ ಎಂದಿಗೂ ಆಪ್ತತೆ, ಶಾಶ್ವತತೆಯನ್ನು ಮೈಗೂಡಿಸಿಕೊಂಡಿರುತ್ತದೆ ಎಂಬುದನ್ನು ಚಿತ್ರಾಂಗದೆಗಾದ ಮನಃಪರಿವರ್ತನೆಯ ಮೂಲಕ ಅಂಕಣಕಾರ್ತಿ ಸಂಕೇತಿಸುತ್ತಾರೆ.

ಹಲವು ವರ್ಷಗಳ ನಂತರ ಅರ್ಜುನ ಬರುತ್ತಿರುವನೆಂಬ ಸುದ್ದಿ ತಿಳಿದ ಚಿತ್ರಾಂಗದೆ ಅವನ ಬರುವಿಕೆಯ ಸಂದರ್ಭದಲ್ಲಿ ತಾನು ಅಲಂಕಾರಗೊಳ್ಳುವ ಪರಿಯು ಅರ್ಜುನನ ಮೇಲೆ ಚಿತ್ರಾಂಗದೆ ಇಟ್ಟಿರುವ ಪ್ರೀತಿ ಮಾಗಿಲ್ಲವೆಂಬ ವಿಚಾರವನ್ನು ಧ್ವನಿಸುತ್ತದೆ. ಕೇವಲ ಔಪಚಾರಿಕವಾಗಿ ಚಿತ್ರಾಂಗದೆಯನ್ನು ಅರಮನೆಗೆ ಕರೆಯುವ ಅರ್ಜುನನ ಆಹ್ವಾನವನ್ನು ಚಿತ್ರಾಂಗದೆ ತಿರಸ್ಕರಿಸುತ್ತಾಳೆ. ಇಲ್ಲಿ ಕಾಲಕ್ಕೆ ತಕ್ಕಂತೆ ಅರ್ಜುನನ ಜೊತೆಗೆ ಚಿತ್ರಾಂಗದೆಯು ಪರಿಸ್ಥಿತಿಯನ್ನು ನಿರ್ವಹಿಸುವ ರೀತಿ ನಿಜಕ್ಕೂ ಆಶ್ಚರ್ಯವನ್ನುಂಟು ಮಾಡುತ್ತದೆ. ಇಲ್ಲಿ ಗಂಡು ಹೆಣ್ಣಿನ ಸಂಭೋಗವನ್ನು ಕೇವಲ ದೈಹಿಕವಾಗಲ್ಲದೆ ಭಾವನಾತ್ಮಕವಾಗಿಯೂ ತೆಗೆದುಕೊಂಡ ಹೆಣ್ಣು, ಗಂಡು ಕೇವಲ ದೈಹಿಕ ಸುಖಕ್ಕಾಗಿ ಸಂಧಿಸಿರುತ್ತಾನೆ ಎಂಬ ಸತ್ಯವನ್ನು ಹೆಣ್ಣಾದವಳು ಸಹಿಸಲು ಹೇಗೆ ಸಾಧ್ಯ? ಆದರೆ ತಾನು ಸಂಧಿಸಿದ ಪುರುಷನಿಂದ ದೂರವಿದ್ದರೂ ಕರುಳಕುಡಿಯನ್ನು ವೀರನಂತಯೇ ಸಾಕುವ ಚಿತ್ರಾಂಗದೆಯ ನಡೆ ಇಡೀ ಸ್ತ್ರೀ ಕುಲಕ್ಕೆ ಮಾದರಿಯಾಗಿದೆ.

**ಸೀತೆ**

ಶೂರ್ಪನಖಿಯನ್ನು ರಾಮ–ಲಕ್ಷ್ಮಣರು ಅಪಮಾನ ಮಾಡಿದಕಷ್ಟೇ ಸೀತೆಯನ್ನು ಅಪಹರಿಸಿ, ಅವಳನ್ನು ಸ್ವಲ್ಪವೂ ಸ್ಪರ್ಶಿಸದ ರಾವಣ ಒಂದು ಕಡೆಯಾದರೆ, ಸೀತೆಯನ್ನು ಕರೆದುಕೊಂಡು ಹೋಗಲು ಬಂದ ಸೀತೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸಿದ ಮತ್ತು ಶೂರ್ಪನಖಿಯನ್ನು ಅವಮಾನಿಸಿದ ರಾಮ ಇನ್ನೊಂದು ಕಡೆ. ಹೀಗಿರಬೇಕಾದರೆ ರಾಮನಲ್ಲಿ ಸಮಾಜ ಅಪೇಕ್ಷಿಸುವ ಆದರ್ಶದ ಗುಣವನ್ನು ಹೇಗೆ ಹುಡುಕಲು ಸಾಧ್ಯ? ಆದರೂ ರಾಮನನ್ನು ಸಮಾಜ ಮೆಚ್ಚುತ್ತದೆ. ಕಾರಣವಿಷ್ಟೆ, ಪ್ರಜಾಹಿತ ಕಾಯುವ ಜೊತೆಗೆ

ಸಂಸ್ಕೃತಿಯ ಪರಿಪಾಲಕನೆಂದು. ಇಂತಹ ರಾಮನು ಕಾಡಿನಲ್ಲಿ ತನ್ನ ಕೊನೆಗಾಲವನ್ನು ಕಳೆಯುತ್ತಿರುವ ಸೀತೆಯನ್ನು ತನ್ನರಮನೆಗೆ ಕರೆದರೂ ಅವನ ಜೊತೆ ಹೋಗದ ಸೀತೆಯು ಕಾಡಿನಲ್ಲಿಯೇ ಭೂಮಿ ಪಾಲಾಗುತ್ತಾಳೆ. ಸೀತೆಯ ಈ ನಡೆಯನ್ನು ಇಂದಿನ ಹೆಣ್ಣುಮಕ್ಕಳಿಗೆ ಆದರ್ಶಪ್ರಾಯ ಎಂಬಂತೆ ಅಂಕಣಕಾರ್ತಿ ಎತ್ತಿ ಹಿಡಿಯುತ್ತಾರೆ. ಏಕೆಂದರೆ ರಾಮನಿಗೆ ತಾನೊಬ್ಬ ಆದರ್ಶ ದೊರೆಯಾಗುವ ಹಂಬಲವಿತ್ತೇ ಹೊರತು ಸೀತಾಪತಿಯಾಗುವ ಹುಮ್ಮಸಿರಲಿಲ್ಲ ಎಂಬ ಸಮರ್ಥನೆಯನ್ನೂ ಅಂಕಣಕಾರ್ತಿ ಕೊಡುತ್ತಾರೆ. ರಾಮನನ್ನು ಬದುಕಿನಲ್ಲಿ ಸ್ವತಂತ್ರ ಆಯ್ಕೆ ಮತ್ತು ಸ್ವಾಭಿಮಾನವಿದೆ. ಆದರೆ ಸೀತೆ...! ಎಲ್ಲವನ್ನೂ ಸಹಿಸಿಕೊಂಡವಳು. ರಾವಣನ ಜೊತೆಗೆ ಕಾಡನ್ನೂ ರಾಮನನ್ನೂ ಸಹಿಸಿಕೊಂಡವಳು. ರಾಮ ತನ್ನನ್ನು ಅಗ್ನಿ ಪರೀಕ್ಷೆಗೆ ಒಳಪಡಿಸಿದರೂ ರಾಮನನ್ನು ತಿರಸ್ಕರಿಸದ, ದ್ವೇಷಿಸದ ಸೀತೆ ತನ್ನಿಬ್ಬರು ಮಕ್ಕಳನ್ನು ಒಬ್ಬಂಟಿಯಾಗಿ ಸಾಕಿ ಕೊನೆಗೆ ರಾಮ ಕಾಡಿನಿಂದ ಅರಮನೆಗೆ ಆಹ್ವಾನಿಸಿದರೂ ಸೀತೆ ನಯವಾಗಿ ಆಹ್ವಾನವನ್ನು ತಿರಸ್ಕರಿಸಿ ಆದರ್ಶತೆ ಮೆರೆಯುತ್ತಾಳೆ.

**ಮಾಧವಿ**

ಯಯಾತಿಯ ಮಗಳು ಮಾಧವಿ ತನ್ನ ತಂದೆಯಿಂದಲೇ ಮಾರಾಟಕ್ಕೆ ಒಳಗಾದವಳು. ಯಯಾತಿ, ಯಯಾತಿಯಿಂದ ಮಗಳನ್ನು ದಾನ ರೂಪದಲ್ಲಿ ಪಡೆದ ವಿಶ್ವಾಮಿತ್ರ ಶಿಷ್ಯ ಗಾಲವ ಮತ್ತು ಗುರು ವಿಶ್ವಾಮಿತ್ರ ಈ ಮೂವರು ಪುರುಷರ ನಡುವೆ ನಲುಗಿದ ಜೀವ ಮಾಧವಿ ಎಂದು ಅಂಕಣಕಾರ್ತಿ ಮಾಧವಿಯನ್ನು ಚಿತ್ರಿಸುತ್ತಾರೆ. ತನ್ನ ದೇಹವನ್ನು ಮಾರಾಟಕಿಟ್ಟು ಗಾಲವನಿಗೆ ಕುದುರೆಗಳನ್ನು ಸಂಪಾದಿಸಿ ಕೊಡುತ್ತಿದ್ದ ಮಾಧವಿಗೆ, ಶ್ರೇಷ್ಠ ಗುರು ಎನಿಸಿದ್ದ ವಿಶ್ವಾಮಿತ್ರನಲ್ಲೂ ನ್ಯಾಯ ದೊರೆಯದೆ ಹೋಯಿತು. ಮಾಧವಿಗೆ ಅವನಲ್ಲಿಯೂ ತನ್ನ ದೇಹವನ್ನು ಅನಿವಾರ್ಯವಾಗಿ ಒಡ್ಡುವ ಪರಿಸ್ಥಿತಿ ಎದುರಾಗುತ್ತದೆ. ಮಾಧವಿ ಮತ್ತೆ ಮರಳಿ ತಂದೆ ಬಳಿಗೆ ಬಂದಾಗ, ಯಯಾತಿ ಅವಳನ್ನು ಅರಮನೆಯಿಂದ ಹೊರಕಳಿಸುವ ಯೋಚನೆಯಿಂದ ಅವಳು ಮುದುಕಿಯಾದರೂ ಸ್ವಯಂವರವನ್ನು ಏರ್ಪಡಿಸುತ್ತಾನೆ. ಈ ಸಂದರ್ಭದಲ್ಲಿ ತಂದೆ ಮತ್ತು ನವ ವರರ ಮುಂದೆ ಕಾಮ ಪಿಶಾಚಿ ಗಂಡಸರ ಮಾನ ತೆಗೆದು ಕಾಡಿಗೆ ಹೋಗುವ ಮಾಧವಿ ನಡೆಯನ್ನು ಅಂಕಣಕಾರ್ತಿ ಸಮರ್ಥಿಸಿಕೊಳ್ಳುತ್ತಾರೆ. ಹೋಗುವ ಮುನ್ನ ಮಾಧವಿ ತೀವ್ರವಾಗಿ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಕಾಡಿನ ಮುಖ ಮಾಡುತ್ತಾಳೆ. "ಹತ್ತಾರು ವರ್ಷ ತಪಸ್ಸನ್ನು ಆಚರಿಸಿದರೂ ಕಾಮನೆಗಳನ್ನು ಗೆಲ್ಲಲಾಗದ ನಿಮ್ಮ ಚಂಚಲತೆಗೆ ನನ್ನ ಧಿಕ್ಕಾರವಿರಲಿ. ಇನ್ನೊಬ್ಬಳನ್ನು ಸಹಜೀವಿಯಾಗಿ ನೋಡಲಾಗದ ನಿಮ್ಮ ಅಜ್ಞಾನಕ್ಕೆ ನನ್ನ ಅನುಕಂಪವಿದೆ. ನಾನು ಜ್ಞಾನದ ಮಾರ್ಗವನ್ನರಸಿ ಹೊರಟಿರುವೆ, ಆತ್ಮೋದ್ಧಾರದ ನಿಜ ಸಾಧಕಳಾಗಲು ಹೊರಟಿರುವೆ. ನಾನಿನ್ನು ಬರುವೆ" ಎಂದು ಕಾಡಿಗೆ ಹೊರಡುತ್ತಾಳೆ.

ಕಾಡಿಗೆ ಹೊರಡುವ ಮುನ್ನ ಮಾಧವಿಗೆ ತಾನು ಸಂಧಿಸಿದ ನಾಲ್ವರು ಪುರುಷರಿಗೆ ಹುಟ್ಟಿದ ನಾಲ್ಕು ಮಕ್ಕಳಲ್ಲಿ ಒಂದಾದರೂ ನನ್ನ ಸ್ವತ್ತಾಗಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದಾಗ ವಿಶ್ವಾಮಿತ್ರನೂ ಸೇರಿದಂತೆ ಎಲ್ಲರೂ ಅವಳ ಬಯಕೆ, ಹಕ್ಕನ್ನು ತಿರಸ್ಕರಿಸಿ, ಅದಕ್ಕೆ ಪ್ರತಿಯಾಗಿ ಸಮರ್ಥನೆಯನ್ನು ಕೊಡುತ್ತಾರೆ. ಉಶೀನರ 'ಬೆಳವ ಭೂಮಿ ಪೈರಿನ ಒಡೆತನವನ್ನು ಬಯಸಲಾಗದು. ಅದೇನಿದ್ದರೂ ಬಿತ್ತಿದವನ ಸ್ವತ್ತು' ಎಂಬ ಸಮರ್ಥನೆಯನ್ನು ಕೊಟ್ಟು ಮುನ್ನಡೆಯುತ್ತಾನೆ. ಬಿತ್ತಿದವನು ಗಂಡ ಆದರೆ ಹೆಣ್ಣೇನು? ಹೆಣ್ಣಿಲ್ಲದೆ

ಹುಟ್ಟುಂಟೆ? ಇಲ್ಲಿ ಹೆಣ್ಣು ಸಂತಾನೋತ್ಪತ್ತಿಯ ಭಾಗವಾಗಿದ್ದರೂ ಅದನ್ನು ಪರಿಗಣಿಸದ ವ್ಯವಸ್ಥೆಯೊಂದಿಗೆ ಇದನ್ನು ಕೇಳದೆ, ಪ್ರಶ್ನಿಸದೆ, ಪ್ರತಿರೋಧಿಸದೆ ಇರುವ ಹೆಣ್ಣು ವರ್ಗದವರಿಂದಲೇ ಇಂತಹ ಪರಿಪಾಠಲುಗಳನ್ನು ಪುರುಷ ವ್ಯವಸ್ಥೆ ಮುಂದುವರಿಸಿಕೊಂಡು ಬಂದದ್ದು. ಇಂತಹ ಪುರುಷ ವ್ಯವಸ್ಥೆಯನ್ನು ಧಿಕ್ಕರಿಸದ ಮಾಧವಿಯನ್ನು ಈ ವ್ಯವಸ್ಥೆ 'ಮಹಾನ್ ತಪಸ್ವಿಯಾಗಲು ದೀಕ್ಷಾಬದ್ಧಳಾಗಿ ತೆರಳಿದಳು ಮಾಧವಿ' ಎಂದು ಇತರರನ್ನು ನಂಬಿಸಲು ಹೊರಡುತ್ತದೆ. ಮಾಧವಿಗೂ ಈ ಹುನ್ನಾರದ ಬಗ್ಗೆ ಅರಿವಿರುತ್ತದೆ. ಆದರೆ ಮಾಧವಿಗೆ ಕಾಡೇ, ಪ್ರಕೃತಿಯೇ ಅಲ್ಲಿನ ಸಂಗವೇ ಹಿತವೆನಿಸುತ್ತದೆ. ಬೇಕೆನಿಸಿದಾಗ ಬೇಕಾದನ್ನು ಬಿತ್ತುವ, ಬಿತ್ತಿದ್ದು ಮೊಳಕೆಯಾಗುವ, ಮೊಳಕೆಯಾಗಿದ್ದು ಗಿಡವಾಗಿ, ಹಸಿರಾಗಿ, ಹೂವಾಗಿ, ಹಣ್ಣಾಗಿ ನಳನಳಿಸುವುದನ್ನು ನೋಡಿ ಆನಂದಿಸುವ ಅನುಭಾವದ ವ್ಯಕ್ತಿ ಮಾಧವಿ. ಅದಕ್ಕಾಗಿ ಅಂಕಣಕಾರ್ತಿ ಮಾಧವಿಯನ್ನು, 'ಅವಳನ್ನು ಸುತ್ತಿದ ಭವ ಬಂಧನ ತೊಡೆದ ಪುರಾಣದ ಮೊದಲ ಹೆಣ್ಣಾಗಿ ಹೆಜ್ಜೆ ಮೂಡಿಸಿದವಳು' ಎಂದು ಪ್ರಶಂಶಿಸುತ್ತಾರೆ.

**ಅಕ್ಕಮಹಾದೇವಿ**

ಅಕ್ಕಮಹಾದೇವಿ ಮದುವೆಯಾದರು ರಾಜನಾದ ಗಂಡನ ಸಂಗ ಇರದೆ ಆತ್ಮಸಂಗಾತನಾದ ಚೆನ್ನಮಲ್ಲಿಕಾರ್ಜುನನ್ನು ಹುಡುಕಿಕೊಂಡು ಹೋಗಿದ್ದು ದುಷ್ಟ ಗಂಡನ ಕೌಶಿಕನ ಅಹಂಕಾರಕ್ಕೆ ಕೊಟ್ಟ ಒಂದು ದೊಡ್ಡ ಪೆಟ್ಟು. ಜೊತೆಗೆ ಹೆಣ್ಣಿನ ಜೀವನಕ್ಕೊಂದು ಆಯ್ಕೆ, ಸ್ವಾತಂತ್ರ್ಯ, ಅಭಿವ್ಯಕ್ತಿ ಇದೆ ಎಂಬುದನ್ನು 12ನೆಯ ಶತಮಾನಕ್ಕೆ ತನ್ನ ನಡೆಯಿಂದಲೇ ತಿಳಿಸಿಕೊಟ್ಟ ಅಕ್ಕನ ಮಾರ್ಗವನ್ನು ಅಂಕಣಕಾರ್ತಿ ಮೆಚ್ಚುತ್ತಾರೆ. ಆದರೆ ಅಕ್ಕಮಹಾದೇವಿಯ ಇನ್ನೊಂದು ನಡೆಯನ್ನು ಇವತ್ತಿನ ಕಾಲಕ್ಕೆ ತೋರಗೋಡುತ್ತಾರೆ. ಅಕ್ಕನನ್ನು ಅಂಕಣಕಾರ್ತಿ ಇನ್ನೊಂದು ನೋಟದಲ್ಲಿ ನೋಡುವ ಬಗೆಯಿದು. ಅಂದರೆ ಇರುವ ಗಂಡನನ್ನು ಬಿಟ್ಟು ಇಲ್ಲದ ಆತ್ಮ ಸಂಗಾತನನ್ನು ಹುಡುಕಿ ಹೋಗುವ ಬದಲಾಗಿ ಇರುವ ಗಂಡನನ್ನೇ ಹೊಂದಿಸಿಕೊಳ್ಳುವ ಬಗೆಯನ್ನು ಅಂಕಣಕಾರ್ತಿ ಸ್ತ್ರೀ ವರ್ಗದ ಆಯ್ಕೆಯಾಗಿ ಮುಂದಿಡುತ್ತಾರೆ. ಅಂದರೆ ಅಕ್ಕನಂತೆ ದೃಢತೆ, ನಿಶ್ಚಲತೆ, ವೈರಾಗ್ಯ, ಮತ್ತು ಛಲದಿಂದ ಇಂದಿನ ಮಹಿಳೆಯರು ನಡೆದುಕೊಳ್ಳಲು ಕಷ್ಟವಾಗುವುದು ಖಂಡಿತ. ಆದ್ದರಿಂದಲೇ ಇರುವ ಗಂಡನನ್ನು ಬಗ್ಗಿಸಿ, ಅವನನ್ನೇ ಜಂಗಮನಾಗಿಸಬೇಕು, ಅದು ಪ್ರೀತಿಯಿಂದ ಸಾಧ್ಯ ಎನ್ನುವ ಅಂಕಣಕಾರ್ತಿಯ ಮಾತನಲ್ಲಿ, ಸ್ತ್ರೀ ವರ್ಗವು ಬದುಕಿನಿಂದ ಪಲಾಯನ ಗೈಯ್ಯುವ ಬದಲು ಬದುಕನ್ನು ನಯ–ನಾಜೂಕಿನಿಂದ ಬಗ್ಗಿಸಿ, ಹೊಗ್ಗಿಸಿಕೊಳ್ಳುವ ಚಾತುರ್ಯ್ಯ ಮೆರೆಯಬೇಕೆಂಬ ಆಶಯವಿದೆ.

**ಯಶೋಧರೆ**

'ಅಗ್ನಿಸಾಕ್ಷಿಯಾಗಿ ಒಂದಾದ ಅವರು ಬೇರೆಯಾಗುವುದು ಅವನ ಆಯ್ಕೆ ಮಾತ್ರವೇ ಎಂದಾದರೆ ತನ್ನ ಅಸ್ತಿತ್ವಕ್ಕೆ ಬೆಲೆಯಲ್ಲಿ?' ಎನ್ನುವ ಪ್ರಶ್ನೆಯನ್ನು ಅಂಕಣಕಾರ್ತಿ, ಯಶೋಧರೆಯನ್ನು ಸರಾಸಗಟಾಗಿ ಬಿಟ್ಟು ಹೋದ ಗೌತಮನ ಹಿನ್ನೆಲೆಯಲ್ಲಿ ಮದುವೆಯಾದ ಪ್ರತಿ ಗಂಡಿಗೂ ಎತ್ತುತ್ತಾರೆ. ಪ್ರತಿಯೊಬ್ಬ ಗಂಡಿನ ಯಶಸ್ಸಿನ ಹಿಂದೆ ಹೆಣ್ಣಿರುವಂತೆ ಗೌತಮನ ಜಗತ್ಪ್ರಸಿದ್ಧತೆಯ ಹಿಂದೆ ಯಶೋಧರೆ ಇದ್ದಾಳೆ. ಜ್ಞಾನೋದಯದ ನಂತರ ಗೌತಮನೇ ತಾನು ಮನೆ ಬಿಟ್ಟು ಹೋದದ್ದಕ್ಕಾಗಿ ಯಶೋಧರೆಯ ಕ್ಷಮೆಯಾಚಿಸಲು ಬಂದಲ್ಲಿ ಅವನನ್ನು ಯಶೋಧರೆ ಕ್ಷಮಿಸುವುದಿಲ್ಲ. 'ಮಹಿಳೆಯರಿಗೆ ದೀಕ್ಷೆ ನೀಡಿದರೆ

ಇತರ ಭಿಕ್ಷುಗಳ ಮನೋದಾರ್ಢ್ಯಕ್ಕೆ ಧಕ್ಕೆ ಆಗಬಹುದು' ಎಂಬ ಕಾರಣದಿಂದ ಸುಜಾತ ಎಂಬ ಹೆಣ್ಣು ಮಗಳಿಗೆ ಗೌತಮ ದೀಕ್ಷೆ ಕೊಡಲು ನಿರಾಕರಿಸುತ್ತಾನೆ. ಗೌತಮನ ಈ ತತ್ವಕ್ಕೆ ಯಶೋಧರೆ ಪ್ರತಿರೋಧವನ್ನು ತೋರುತ್ತಾಳೆ. ಆದರೆ ಗೌತಮನಿಗೆ ಯಶೋಧರೆಯ ಬಗ್ಗೆ ಒಳ್ಳೆಯ ಅಭಿಪ್ರಾಯವೇ ಇದೆ. 'ಜ್ಞಾನೋದಯಕ್ಕೂ ಮುಂಚೆ ಅರಮನೆಯಲ್ಲಿದ್ದಾಗ ನನ್ನ ಜ್ಞಾನದ ಬಾಗಿಲನ್ನು ಮೊದಲು ತೆರೆದಿದ್ದು ನೀನೆ' ಎನ್ನುವಂತೆ ಯಶೋಧರೆಯನ್ನು ಗೌತಮ ಪ್ರಶಂಶಿಸುತ್ತಾನೆ. ಯಶೋಧರೆಯ ಸಹನೆ ಗೌತಮನ ಏಳಿಗೆಗೆ ಸುಗಮ ಮಾರ್ಗವನ್ನು ತೆರೆದಿಡುತ್ತದೆ ಎಂಬುದು ಯಶೋಧರಿಗೆ ತಿಳಿದಿದ್ದರಿಂದಲೇ ಗೌತಮನ ನಡವಳಿಕೆಯನ್ನು ತೀವ್ರವಾಗಿ ವಿರೋಧಿಸುವುದಿಲ್ಲ. ಬದಲಾಗಿ ಗೌತಮ ತನಗಿಷ್ಟದ ದಾರಿಯನ್ನು ಹಿಡಿಯಲು ಪರೋಕ್ಷವಾಗಿ ಅನುಮತಿಯನ್ನು ನೀಡುತ್ತಾಳೆ.

**ಶಕುಂತಲೆ**

ಅಂಕಣಕಾರ್ತಿ ಬಣ್ಣಿಸುವಂತೆ ಸ್ವೀಕಾರಕ್ಕೂ ನಿರಾಕರಣೆಗೂ ಒಂದು ಅದ್ಭುತ ಶಕ್ತಿಸಂಗಮ ಶಕುಂತಲೆ. ಹುಟ್ಟಿನಿಂದಲೂ ಯಾರ ಪ್ರೀತಿಯನ್ನು ಶಾಶ್ವತವಾಗಿ ಪಡೆಯದ ನತದೃಷ್ಟೆ ಶಕುಂತಲೆ. ಕೇವಲ ಮೂರು ದಿನ ದುಷ್ಯಂತನ ಜೊತೆಯಲ್ಲಿ ಇದ್ದುದ್ದಕ್ಕಾಗಿ ಇಡೀ ಜೀವನವೇ ಒಬ್ಬಂಟಿಯಾಗಿ ಕಳೆದ ಶಕುಂತಲೆ, ಸದಾ ಕಾಲ ತಾನು ಮಾಡಿದ ತಪ್ಪಿಗೆ ಪಶ್ಚಾತಾಪ ಪಡುತ್ತಾಳೆ. ಆದರೂ ದುಷ್ಯಂತನನ್ನು ಎಲ್ಲೂ ದೂರುವುದಿಲ್ಲ. ಬದಲಾಗಿ ದುಷ್ಯಂತನನ್ನು ನಯವಾಗಿ ಸ್ವೀಕರಿಸಿದಂತೆ ನಯವಾಗಿಯೇ ತಿರಸ್ಕರಿಸುತ್ತಾಳೆ. ಕೊನೆಗೆ ತನ್ನ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾಗಲು ದುಷ್ಯಂತನಲ್ಲಿ ಗಂಡು ಸಂತಾನವಿರುವುದಿಲ್ಲ. ಆಗ ಶಕುಂತಲೆಯ ನೆನಪಾಗುತ್ತದೆ. ಅದು ಎಲ್ಲವೂ ತನ್ನ ಸ್ವಾರ್ಥಕ್ಕಾಗಿ. ಒಂದು ಹೆಣ್ಣನ್ನು ಸಂಧಿಸಿ ನಿನ್ನಂತೆ ಹಲವು ಹೆಣ್ಣು ಮಕ್ಕಳು ಅರಮನೆಯಲ್ಲಿದ್ದಾರೆ ಬಂದು ಸೇರಿಕೊ ಎನ್ನುವ ದುಷ್ಯಂತನ ಅನಾಯಾಸ ಮಾತು ಹೆಣ್ಣಿನ ಗೌರವಕ್ಕೆ ಧಕ್ಕೆ ತರುವಂತದ್ದೇ ಆಗಿದೆ. ವ್ಯವಸ್ಥೆಯ ಸುಳಿಯೊಳಗೆ ಶಕುಂತಲೆ ಬಂದಿಯಾಗಿರುವುದರಿಂದಲೇ ಇಂತಹ ವರ್ತನೆಗಳಿಗೆ ಎಲ್ಲೂ ಪ್ರತಿರೋಧವನ್ನು ದುಷ್ಯಂತನ ಬಳಿ ತೋರುವುದೇ ಇಲ್ಲ. ಜೊತೆಗೆ ದುಷ್ಯಂತನಂತೆ ತಾನೂ ಕ್ಷಣಿಕ ಸುಖಕ್ಕಾಗಿ ಮೈಮರೆತೆನು ಎಂಬ ಅಪರಾಧ ಭಾವವು ಅವಳನ್ನು ಕಾಡಿರಬಹುದು.

**ದ್ರೌಪದಿ**

ಬೇಕಾದುದ್ದೆಲ್ಲವನ್ನು ಅನುಭವಿಸುವ ಸೌಲಭ್ಯವಿದ್ದರೂ ಪಾಂಚಾಳ ರಾಜನ ಮಗಳಾಗಿ ಹುಟ್ಟಿದರೂ ಏನನ್ನೂ ಪಡೆಯಲಾಗದ ಸ್ಥಿತಿ ದ್ರೌಪದಿಯದು. "ಪಾರ್ಥನನ್ನು ಪತಿಯಾಗಿ ಪಡೆದ ಹೆಮ್ಮೆ ಪಾಂಡವರ ಪತ್ನಿ ಯಾಗುವ ನಿಯಮದೊಂದಿಗೆ ಮುರುಟಿಕೊಂಡಿತು. ಸಾಮ್ರಾಜ್ಞಿಯಾಗುವ ಕನಸು ಧರ್ಮಜನ ಜೂಜಿನಲಿ ಕೊನೆಗೊಂಡಿತು. ಪುಟ್ಟ ಮಕ್ಕಳನ್ನು ಎತ್ತಿ ಆಡಿಸುವ ಸುಖ ವನವಾಸದಲ್ಲಿ ಮರೆಯಾಯಿತು. ಬೆಳೆದ ಮಕ್ಕಳ ಅಭ್ಯುದಯವನ್ನು ನೋಡುವ ಭಾಗ್ಯವೂ ಅಶ್ವತ್ಥಾಮನಿಂದಾಗಿ ನಾಶವಾಯಿತು. ಮತ್ತೆ ಈ ಸಾಮ್ರಾಜ್ಯ ಇದು ಎಂದಿಗೂ ನನ್ನದು ಅನಿಸಲೇ ಇಲ್ಲ. ಧರ್ಮಜನಿಗೆ ಅನ್ಯ ಪತ್ನಿಯರಿಲ್ಲ. ನೀನೇ ಅವನೊಂದಿಗೆ ಪಟ್ಟವೇರಬೇಕು ಎಂಬ ಅತ್ತೆಯ ಕೊನೆಯ ಆಸೆಗೆ ಅಸ್ತು ಎನ್ನಲೇಬೇಕಿತ್ತು." ಹೀಗೆ ತನ್ನಿಷ್ಟದಂತೆ ಬದುಕಲಾಗಲಿಲ್ಲ ಎನ್ನುವ ಸೀತೆಯ ವಿಚಾರವನ್ನು ಸೀತೆಯ ಸ್ವಗತದಂತೆ ಅಂಕಣಕಾರ್ತಿ ನಿರೂಪಿಸುತ್ತಾರೆ. ಐವರ ಗಂಡರ ಪತ್ನಿಯಾದರೂ ಒಬ್ಬ ಪತಿಯಿಂದ ದೊರೆಯುವಷ್ಟು ಪ್ರೀತಿಯೂ ಅವಳಿಗೆ

ಸಿಗಲಿಲ್ಲ. ಐವರ ಮಕ್ಕಳ ತಾಯಿಯಾದರೂ ಮಕ್ಕಳನ್ನು ಸಾಕುವ ದಿನಗಳಿಂದ ವಂಚಿತಳಾದಳು. ಸಮಾಜ ಅವಳನ್ನು ಆದರ್ಶ ಸ್ತ್ರೀ ಎಂದು ಒಪ್ಪಿರುವುದು ನಿಜವೇ. ಇದಕ್ಕೆ ಕಾರಣ ಅವಳಿಗಿರುವ ಸಹಿಷ್ಣುತೆ. ತನ್ನ ಬದುಕಿನಲ್ಲಿ ಬಂದದ್ದನ್ನು ಸಹಿಸಿ, ಶ್ರೇಷ್ಠತೆಯನ್ನು ಪಡೆದುಕೊಳ್ಳುವ ವ್ಯಕ್ತಿಯಾಗಿ ದ್ರೌಪದಿ ನಮಗೆ ಗೋಚರಿಸುತ್ತಾಳೆ. ಕೌರವರಿಂದ ತನಗಾದ ಅಪಮಾನಕ್ಕೆ, ತನ್ನ ವಂಶಕ್ಕಾದ ಮೋಸಕ್ಕೆ ಅವರ ವಿರುದ್ಧ ಭೀಮನ ಮೂಲಕ ಸೇಡು ತೀರಿಸಿಕೊಳ್ಳುವುದು ಇಡೀ ಸ್ತ್ರೀವರ್ಗದ ಸ್ವಾಭಿಮಾನದ ಸಂಕೇತವಾಗಿ ದ್ರೌಪದಿ ನಮ್ಮ ಮುಂದೆ ನಿಲ್ಲುತ್ತಾಳೆ.

**ಶಾಂತಲೆ**

ಶಾಂತಲೆ, ತನ್ನ ಕಲಾ ಪ್ರತಿಭೆಯನ್ನು ಮದುವೆ ನಂತರ ಸೀಮಿತಗೊಳಿಸಬೇಕೆನ್ನುವ ಒಂದು ರೂಢಿಗತ ಸಂಪ್ರದಾಯಕ್ಕೆ ಕಟ್ಟುಬೀಳುತ್ತಾಳೆ. ಅರ್ಥಾತ್ ಮದುವೆ ಎಂಬುದು ಹೆಣ್ಣು ಮಕ್ಕಳ ಕಲಾಬದುಕಿಗೆ ಕಂಟಕ ಎಂಬ ಇಲ್ಲಿನ ಸ್ಪಷ್ಟೀಕರಣ ಬಹುಮಟ್ಟಿನ ಮಹಿಳೆಯರ ಬದುಕಿನಲ್ಲಿ ಸತ್ಯವೂ ಹೌದು. ಇದರ ಜೊತೆಗೆ ಹೆಣ್ಣು ತನ್ನ ಇಷ್ಟದಂತೆ ಬದುಕುವ ಮಾರ್ಗ ಕಠಿಣವಾದಾಗ ಆ ಸಂದರ್ಭಕ್ಕೆ ತಿರಸ್ಕಾರವನ್ನು ತೋರದ ಭಾವ ಅವಳಲ್ಲಿ ಬೆಳೆದಿರುವುದು ಪುರುಷ ವ್ಯವಸ್ಥೆಯ ರೂಢಿಗತ ಒತ್ತಡದಿಂದಲೇ ಎಂಬುದು ಸುಳ್ಳಲ್ಲ.

ಈ ಅಂಕಣ ಕೃತಿಯಲ್ಲಿ ವಿಮರ್ಶಾತ್ಮಕವಾಗಿ ಚಿತ್ರಿತವಾಗಿರುವ ಒಂದೊಂದು ಸ್ತ್ರೀ ಪಾತ್ರಗಳು ಆದರ್ಶತೆಯನ್ನು ಸ್ಫುರಿಸುವುದರಿಂದ ಇಲ್ಲಿನ ಸ್ತ್ರೀ ಪಾತ್ರಗಳೆಲ್ಲವೂ ಇಂದಿನ ಮಹಿಳಾ ಸಮಾಜಕ್ಕೆ ಮಾದರಿಯಾಗಿ ನಿಲ್ಲುತ್ತವೆ. ಇಲ್ಲಿನ ಸ್ತ್ರೀ ಪಾತ್ರಗಳಾದ ಸೀತೆ, ದ್ರೌಪದಿ, ಚಿತ್ರಾಂಗದಾ, ಶಾಂತಲಾ, ಶಾಕುಂತಲಾ, ಯಶೋಧರಾ, ಮಾಧವಿ ಇನ್ನಿತರೆ ಪಾತ್ರಗಳೆಲ್ಲವೂ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಮೂಡಿಬಂದಿದ್ದು, ಇಡೀ ಸಮಾಜದ ಸ್ತ್ರೀ ವರ್ಗಕ್ಕೆ ದಿಕ್ಸೂಚಿಯಂತಿವೆ.

ಪುರುಷರಲ್ಲಿ ಹುಟ್ಟುವ ಪ್ರೀತಿಯು ಆಮಿಷತೆಯಿಂದ ಕೂಡಿದ್ದ ಸಂದರ್ಭಗಳೂ ಇದ್ದು, ಅವು ಹೆಚ್ಚು ಕಾಲ ಅಸ್ಥಿತ್ವದಲ್ಲಿರಲು ಸಾಧ್ಯವಿಲ್ಲ ಎಂಬುದನ್ನು ಅರ್ಜುನ, ದುಷ್ಯಂತ ಪುರುಷರ ನಡೆವಳಿಕೆಗಳ ಹಿನ್ನೆಲೆಯಲ್ಲಿ ಅರಿಯಬಹುದಾಗಿದ್ದು, ಈ ನಿಟ್ಟಿನಲ್ಲಿ ಹೆಣ್ಣಿನ ಮನಸ್ಸು ಸದಾ ಜಾಗೃತವಾಗಿರಬೇಕಾಗಿರುವುದು ಅಂದಿನಂತೆ ಇಂದಿನ ಕಾಲಕ್ಕೂ ಅನ್ವಯವಾಗುತ್ತದೆ. ಸಾವಿನ ಸನಿಹಕೆ ಸನ್ನಹಿತವಾದರೂ ಇಷ್ಟ ಬಂದಂತೆ ಬದುಕುವಾಸೆಯು ಕನಸಾಗೇ ಉಳಿಯುವ ವಿಚಾರವು ದ್ರೌಪದಿ, ಸೀತೆ, ಮಾಧವಿ ಪಾತ್ರಗಳ ಹಿನ್ನಲೆಯಿಂದ ಖಚಿತವಾಗುತ್ತದೆ. ಜೊತೆಗೆ ಪತ್ನಿಯರ ಅಸ್ಮಿತೆಯನ್ನು ಗುರುತಿಸದ ಪತಿಯರ ಸಹವಾಸ ಅಥವಾ ಸನಿಹ ಪತ್ನಿಯರಿಗೆ ಅವಶ್ಯವಿಲ್ಲ ಎಂಬುದನ್ನು ಸೀತೆಯ ಪಾತ್ರದ ಹಿನ್ನೆಲೆಯಲ್ಲಿ ಗುರುತಿಸಬಹುದು. ಸೀತೆಯ ಅಗ್ನಿಪರೀಕ್ಷೆ ಸರಿಯೇ ಎನಿಸಿದಲ್ಲಿ, ರಾಮನ ಪರೀಕ್ಷೆಯನ್ನು ಸೀತೆ ಮಾಡುವುದರಲ್ಲಿ ತಪ್ಪಾಗಲಾಗದು ಎಂಬುದನ್ನು ಈ ಸಮಾಜ ಒಪ್ಪುವುದೇ? ಖಂಡಿತವಾಗಿಯೂ ಇಲ್ಲ. ಏಕೆಂದರೆ ಪುರುಷ ಸಮಾಜ ಸ್ವಕೇಂದ್ರಿತವಾಗಿ ಬೇಕಾದಂತೆ ಸಮಾಜವನ್ನು ರೂಪಿಸಿಕೊಂಡಿದ್ದು, ಅದರ ಸುತ್ತಾ ಸುತ್ತುವಂತೆ ಸ್ತ್ರೀಯನ್ನು ದುಡಿಸಿಕೊಳ್ಳುತ್ತಿದೆ. "ಸಾಮಾಜಿಕ ನಡಾವಳಿಯೂ ಪುರುಷನಿಗೆ ಪೂರಕವಾಗಿ ಮಹಿಳೆ ಎಂಬುದನ್ನು ದೃಢಪಡಿಸುತ್ತದೆ."[2] ಇದನ್ನು ರಾಮಾಯಣಾದಿಯಾಗಿ ಇವತ್ತಿಗೂ ಸಮಾಜ ನಡೆಸಿಕೊಂಡು ಬಂದಿದೆ.

ಮಾಧವಿಯಂತೆ ಗಂಡಸರ ಪೊಳ್ಳುತನವನ್ನು ಜಾಲಾಡಿ, ಧಿಕ್ಕರಿಸುವ ಸ್ಥೈರ್ಯವನ್ನು ಹೆಣ್ಣುಮಕ್ಕಳು ಬೆಳೆಸಿಕೊಳ್ಳಬೇಕೆ ಹೊರತು ಪರಿಸ್ಥಿತಿಗೆ ಮಣಿಯಬಾರದು. ಪ್ರತಿಭೆಯ ಪ್ರದರ್ಶನಕ್ಕೆ ಆಗುವ ಮದುವೆ, ಮತ್ತಿತರ ಅಡ್ಡಿಗಳನ್ನು ನಿವಾರಿಸವ ಮೂಲಕ ಕಲೆಯನ್ನು ಶಾಶ್ವತಗೊಳಸಬೇಕು ಎಂಬುದನ್ನು ಶಾಂತಲೆ ಪಾತ್ರದ ಒಳಮನಸ್ಸನ್ನು ಬಿಚ್ಚಿಡುತ್ತಾ ಅಂಕಣಕಾರ್ತಿ ಪ್ರಸ್ತುತ ಪಡಿಸುತ್ತಾರೆ. ಅಕ್ಕನ ನಡೆಯನ್ನು ಇಂದಿನ ಮಹಿಳೆಯರು ಅನುಸರಿಸುವುದು ಕಠಿಣವಾದರೂ ಅದರ ಒಂದು ಎಳೆಯನ್ನಾದರೂ ಅಂದರೆ ಇರುವ ಸಂಸಾರದಲ್ಲಿ ತನ್ನಿಷ್ಟದ ವಿಚಾರಗಳನ್ನು ಪ್ರೀತಿಯಿಂದಲೇ ಗಂಡನನ್ನು ಬಾಗಿಸಿ ತರಬಹುದೆಂಬ ಅಂಶವಿಲ್ಲಿ ಅನುಕರಣೀಯ.

ಹೆಣ್ಣಿನ ಜೊತೆ ಗಂಡು ಮೂರು ದಿನ ಬಾಳುವೆಯನ್ನು ತನ್ನ ದೇಹಸುಖಕ್ಕಾಗಿ ನಡೆಸಿ, ಆ ಹೆಣ್ಣನ್ನು ಮರೆಯುವ ವರ್ತನೆಯನ್ನು ಗಂಡು ಸಹಜವಾಗಿ ತೋರಿಸುತ್ತಾನೆ. ಆದರೆ ಹೆಣ್ಣು ಅದರ ಕರ್ಮಫಲವಾಗಿ ಒಂದು ಮಗುವನ್ನು ಭೂಮಿಗಿಳಿಸಿ, ಯಾವ ಪ್ರತಿರೋಧವನ್ನು ತೋರದೆ ಕಲ್ಲುಬಂಡೆಯಾಗುತ್ತಾಳೆ. ಹೆಚ್ಚೆಂದರೆ ತನ್ನ ಮಗುವಿನ ತಂದೆ ಬಂದು ಕರೆದರೆ ಅದರ ನಿರಾಕರಣೆಯನ್ನು ಮೌನವಾಗಿ ತೋರುವುದೊಂದನ್ನು ಹೊರತುಪಡಿಸಿ. ಆದರೆ ಕಾಲ ಬದಲಾದಂತೆ ಮನುಷ್ಯರ ಮನೋಗುಣವು ಬದಲಾಗಬೇಕಲ್ಲವೇ? ಹೆಣ್ಣು ಸಹ ಗಂಡಿನ ವಿಚಾರದಲ್ಲಿ ತಳೆವ ಭಾವವೂ ಕೂಡ. ಪ್ರಸ್ತುತ ಹೆಣ್ಣು ದುಷ್ಯಂತ, ಅರ್ಜುನ, ರಾಮ, ಲಕ್ಷ್ಮಣ, ಗೌತಮನನ್ನು ಸುಲಭವಾಗಿ ಕ್ಷಮಿಸುವಂತಹ ಕ್ಷಮಯಾಧರಿತ್ರಿ ಅಲ್ಲ. ಕ್ಷಮಯಾಧರಿತ್ರಿ ಎಂದು ಕರೆಸಿಕೊಳ್ಳುವ ಆಸೆಯೂ ಅವಳಿಗಿಲ್ಲ. ತನ್ನ ಬದುಕಿಗೆ ಮಿಡಿಯುವ ಜೀವವೊಂದು ಬೇಕು. ಅಂತಹ ಜೀವವನ್ನು ಪಡೆದು, ಉಳಿಸಕೊಳ್ಳಬೇಕೆನ್ನುವ ಹಠ ಇಂದಿನ ಸ್ತ್ರೀಯರಲ್ಲಿ ಇದ್ದರೂ ತಪ್ಪೆನಿಸದು.

ಒಟ್ಟಿನಲ್ಲಿ ಇಲ್ಲಿ ಸ್ತ್ರೀಯರು ಆಯಾಯ ಕಾಲಕ್ಕೆ ಆಯಾಯ ಸಂದರ್ಭಕ್ಕೆ ಉಚಿತವಾಗಿ ಅಥವಾ ಸಂಪ್ರದಾಯದ ಚೌಕಟ್ಟಿನಲ್ಲಿ, ಪುರುಷ ರೂಪಿತ ವ್ಯವಸ್ಥೆಯಲ್ಲಿ ನಡೆದುಕೊಂಡ ಸಂದರ್ಭಗಳೇ ಹೆಚ್ಚು. "ಲಿಂಗಾಧಾರಿತ ಶ್ರಮ ವಿಭಜನೆ, ಸಂತಾನೋತ್ಪಾದನೆ, ಮಕ್ಕಳಪಾಲನೆ, ವಯಸ್ಸಾದವರ ಹಾಗೂ ರೋಗಿಗಳ ಶುಶ್ರೂಷೆ, ಅತಿಥಿ ಸತ್ಕಾರ ಮೊದಲಾದ ಗೃಹಕೃತ್ಯಗಳು ಮಹಿಳೆಯರ ಬದುಕಿನಿಂದ ಕಾಲವನ್ನು ಇಡಿಇಡಿಯಾಗಿ ಹೇಗೆ ಕಸಿದುಕೊಳ್ಳುತ್ತವೆ ಎಂಬುದನ್ನು ಹೊರಲೋಕದ ಕಣ್ಣಿನಿಂದ ಸದಾ ಮರೆಸಿಡಲಾಗಿರುತ್ತದೆ."[3] ಆದರೆ ಪ್ರಸ್ತುತ ಕಾಲದಲ್ಲಿ ಸಂದರ್ಭಕ್ಕೆ ಬಂಧಿಯಾಗುವ ಬದಲಾಗಿ ಮನುಷ್ಯಸಮಾನ ಮನಸ್ಥಿತಿಯಿಂದ ಮಾನವೀಯ ನೆಲೆಯಲ್ಲಿ ಬಿಕ್ಕಟ್ಟು ಬರದ ಹಾಗೆ ಜೀವನದಲ್ಲಿ ಎದುರಾದ ದುಸ್ಥಿತಿಗಳನ್ನು ಮಹಿಳೆ ಆತ್ಮವಿಶ್ವಾಸದಿಂದ ಎದುರಿಸಬೇಕಾಗುತ್ತದೆ. ಅದು ಮಹಿಳೆಗೆ ಅನಿವಾರ್ಯವೂ ಆಗಿದೆ.

ಮನುಷ್ಯ ತನ್ನ ಸಹಜ ಗುಣಕ್ಕೆ ಬದಲಾಗಿ ಅಸಹಜತೆಯನ್ನು ತೋರಿಸ ಹೊರಟಾಗ ಆಗುವ ಅನಾಹುತ, ತಪ್ಪುಗಳಿಗೆ, ದುರಂತಗಳಿಗೆ ಅವನೇ ಕಾರಣ. ಪುರುಷ ಆಗಲಿ, ಸ್ತ್ರೀ ಆಗಲಿ ಅದರ ಸಂಪೂರ್ಣ ಹೊರೆಯನ್ನು ಹೊರಲೇಬೇಕು. ಆದರೆ ಚರಿತ್ರೆಯನ್ನು ತಿರುವಿಹಾಕಿದರೆ ಪುರುಷ ತನ್ನ ಅಸಹಜ ವರ್ತನೆಯ

ಪರಿಣಾಮದ ಸಂದರ್ಭಗಳಿಂದ ಪಲಾಯನ ಹೊಂದಿರುವುದೇ ಹೆಚ್ಚು. ಆ ಸಂದರ್ಭದಲ್ಲಿ ನಲುಗಿ ಹೋದವರು ಸ್ತ್ರೀಯರಲ್ಲದೇ ಬೇರ‍್ಯಾರು ಅಲ್ಲ.

ಸಕರಾತ್ಮಕತೆಗೆ ಪುರುಷರನ್ನು, ನಕರಾತ್ಮಕತೆಗೆ ಸ್ತ್ರೀಯರನ್ನು ಪ್ರತಿನಿಧೀಕರಿಸುವ ಜೊತೆಗೆ ಪುರುಷರೇ ರೂಪಿಸಿದ ವ್ಯವಸ್ಥೆಯಲ್ಲಿ ಪುರುಷರಿಂದ ಬಂಧಿಯಾಗಿದ್ದ ಸ್ತ್ರೀಗೆ ತನ್ನ ವಿಮೋಚನೆಯನ್ನು, ಜೀವನದ ಆಯ್ಕೆ ತಾನೇ ಮಾಡಿಕೊಳ್ಳಬೇಕಾದ ಅನಿವಾರ್ಯತೆಯೊಂದು ಹುಟ್ಟುಕೊಂಡಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಲುಗಿದ ಜೀವಗಳೆಷ್ಟೊ. ಸೀತೆ, ದ್ರೌಪದಿ, ಶಾಕುಂತಲೆ, ಮಾಧವಿ, ಊರ್ಮಿಳೆ, ಚಿತ್ರಾಂಗದೆಯನ್ನು ಪ್ರಾತಿನಿಧಿಕವಾಗಿ ಗುರುತಿಸುತ್ತೇವಷ್ಟೆ. ಇವತ್ತಿಗೂ ಇಂತಹ ಆತಂಕದ ವಾತಾವರಣದಿಂದ ಸ್ತ್ರೀ ವರ್ಗ ಸಂಪೂರ್ಣವಾಗಿ ಮುಕ್ತಿ ಪಡೆದಿಲ್ಲ. ಇಂತಹ ಪರಿಸ್ಥಿತಿಯೊಳಗೆ ಸ್ತ್ರೀ ತೋರಬೇಕಾದ ನಡೆಯನ್ನು ಈ ಲೇಖನದಲ್ಲಿ ಚರ್ಚಿಸಿದ ಪ್ರಾತಿನಿಧಿಕ ಸ್ತ್ರೀ ಪಾತ್ರಗಳ ಬದುಕಿನ ಕೊನೇ ಕ್ಷಣದ ಸನ್ನಿವೇಶಗಳ ಸಂದೇಶದಿಂದ ಅರಿಯಬಹುದು. ಇದಕ್ಕೂ ಮೀರಿದ ಸ್ತ್ರೀಸ್ವಾಸ್ಥ್ಯ ಕೇಂದ್ರಿತ ನಡೆಯನ್ನು ಮುಂದುವರೆದು ತೋರಬಹುದು. ಇದಕ್ಕೆ ಪೂರಕವಾದ ಸಲಹೆಗಳನ್ನು, ಹಿತರಕ್ಷಣೆಯ ಮಾರ್ಗಸೂಚಿಯನ್ನು ಸ್ವತಃ ಅಂಕಣಕಾರ್ತಿ ಸುಧಾ ಆಡುಕಳ ಅವರೇ ಈ ಕೃತಿಯ ಪ್ರತಿ ಲೇಖನದಲ್ಲಿ ಕೊಟ್ಟಿರುವುದು ಪ್ರಶಂಸನೀಯ.

**ಕೊನೆಟಿಪ್ಪಣಿಗಳು**

1. ವೆಂಕಟಲಕ್ಷ್ಮಿ, ಬಿ.ಎಸ್. (ಲೇ). *ಪರಂಪರೆ ಮತ್ತು ಮಹಿಳೆ.* **ಗ್ರಂಥ** ತೇಜಸ್ವಿ ನಿರಂಜನ., ಸೀಮಂತಿನಿ ನಿರಂಜನ (ಸಂ.). ಸ್ತ್ರೀವಾದಿ ಸಾಹಿತ್ಯ ವಿಮರ್ಶೆ. ಪುಟ.267
2. ಶಿವಾನಂದ ವಿರಕ್ತಮಠ, ಎಸ್. *ಮಹಿಳೆ ಮತ್ತು ಧರ್ಮ.* ಪುಟ.28
3. ಸುಮಿತ್ರಾಬಾಯಿ, ಬಿ. ಎನ್. *ಸ್ತ್ರೀವಾದ–ಒಂದು ಅವಲೋಕನ.* ಪುಟ.43

**ಆಕರ ಗ್ರಂಥಗಳು**


- ಸುಧಾ ಆಡುಕಳ. (2019). *ಬಕುಲದ ಬಾಗಿಲಿನಿಂದ.* ಬಹುರೂಪಿ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಮಲ್ಲಿಕಾ ಘಂಟಿ. (ಸಂ.) (2008). *ನಮ್ಮ ಕಣ್ಣಲ್ಲಿ ನೀವು.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಮಂಗಳಾ, ಚಿ.ನ. (2001). *ಎಚ್ಚೆತ್ತ ಹಾದಿಯಲ್ಲಿ ಮಹಿಳೆ.* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
- ಶಿವಾನಂದ ವಿರಕ್ತಮಠ, ಎಸ್. (2018). *ಮಹಿಳೆ ಮತ್ತು ಧರ್ಮ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಶ್ರೀಮತಿ, ಎಚ್.ಎಸ್ (2022). *ಸ್ತ್ರೀವಾದ ಚಿಂತನೆ ಮತ್ತು ಹೋರಾಟ.* ಅಭಿರುಚಿ ಪ್ರಕಾಶನ.
- ಸುಮಿತ್ರಾಬಾಯಿ, ಬಿ.ಎನ್. (2018). *ಸ್ತ್ರೀವಾದ–ಒಂದು ಅವಲೋಕನ.* ಅಹರ್ನಿಶಿ ಪ್ರಕಾಶನ.
- ತೇಜಸ್ವಿ ನಿರಂಜನ., ಸೀಮಂತಿನಿ ನಿರಂಜನ (ಸಂ.) (2014). *ಸ್ತ್ರೀವಾದಿ ಸಾಹಿತ್ಯ ವಿಮರ್ಶೆ.* ಅಭಿನವ ಪ್ರಕಾಶನ.